ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ ಖಂಡಿಸಿ ದಸಂಸ ಪ್ರತಿಭಟನೆ

ಪುರಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್‌ಪ್ರತಿಮೆ ಮುಂಭಾಗ ಧರಣಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಣ ಖಂಡಿಸಿ ದಲಿತ ಸಂಘರ್ಷ ಸಮಿತಿಯವರು (ಡಿ.ಜಿ. ಸಾಗರ ಬಣ) ನಗರದ ಪುರಭವನ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್‌ಪ್ರತಿಮೆ ಮುಂಭಾಗದಲ್ಲಿ ಶುಕ್ರವಾರ ಪ್ರತಿಭಟಿಸಿದರು.

ಉತ್ತರಾಖಂಡದ ರಾಮಲೀಲಾ ಮೈದಾನದಲ್ಲಿ ಮಲ್ಲಿಕಾರ್ಜುನಖರ್ಗೆ ಅವರು ಭಾಷಣ ಮಾಡಿದ್ದರು. ಎರಡು ದಿನದ ನಂತರ ಅಲ್ಲಿಯ ಹಿಂದೂಪರ ಸಂಘಟನೆಯವರು ಸ್ಥಳ ಶುಚಿಗೊಳಿಸಿ, ಹೋಮ-ಹವನ ಮಾಡಿ ಅಸ್ಪೃಶ್ಯತೆ ಆಚರಿಸುವುದರ ಮೂಲಕ ರಾಷ್ಟ್ರೀಯ ಧೀಮಂತ ನಾಯಕರನ್ನು ಅವಮಾನಿಸಲಾಗಿದೆ ಎಂದು ಅವರು ಕಿಡಿಕಾರಿದರು.

ಜಾತಿ ಶ್ರೇಣಿಯಲ್ಲಿ ವಂಚಿತಗೊಂಡ ಸಮುದಾಯದಿಂದ ಬಂದ ಮಲ್ಲಿಕಾರ್ಜುನ ಖರ್ಗೆ ಅವರು ರಾಷ್ಟ್ರ ನಾಯಕರಾಗಿದ್ದಾರೆ. ಇದರ ಹಿಂದೆ ಅವರ ಅನೇಕ ತ್ಯಾಗ ಮತ್ತು ಪ್ರಾಮಾಣಿಕತೆ ಇದೆ. ಇಂತಹ ವ್ಯಕ್ತಿಯ ಮನೋಸ್ಥೈರ್ಯ ಕುಗ್ಗಿಸುವ ಹುನ್ನಾರ ನಡೆದಿದೆ. ಇದು ಕೇವಲ ಖರ್ಗೆ ಅವರಿಗೆ ಆದ ಅವಮಾನವಲ್ಲ, ಶೋಷಿತ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ರೀತಿಯ ದೇಶ ಹಾಗೂ ಸಂವಿಧಾನ ವಿರೋಧಿ ಆಚರಣೆಗಳನ್ನು ಯಾವುದೇ ಕಾರಣಕ್ಕೆ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಅನಿಷ್ಟ ಆಚರಣೆಯನ್ನು ನಾಗರಿಕರು ಖಂಡಿಸಬೇಕು. ಈ ಕೃತ್ಯದ ಹಿಂದೆ ಯಾರೇ ಇದ್ದರೂ ಅವರ ವಿರುದ್ಧ ದೇಶದ್ರೋಹಿ, ಆಟ್ರಾಸಿಟಿ ಕಾಯ್ದೆ ಹಾಗೂ ಅಸ್ಪೃಶ್ಯತೆ ಆಚರಣೆ ವಿರೋಧಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಬೇಕು. ಇಲ್ಲದಿದ್ದರೇ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದು ಎಂದು ಅವರು ಎಚ್ಚರಿಸಿದರು.

ದಸಂಸ ರಾಜ್ಯ ಸಮಿತಿ ಸದಸ್ಯ ಗೋವಿಂದರಾಜು, ಜಿಲ್ಲಾ ಸಂಚಾಲಕ ಮಲ್ಲೇಶ ಚುಂಚನಹಳ್ಳಿ, ಮುಖಂಡರಾದ ರಾಜಣ್ಣ ಇಟ್ನಾ, ಕೃಷ್ಣ ಕೊಳಘಟ್ಟ, ಸುರೇಶ್ ಯರಗನಹಳ್ಳಿ, ರಾಜು ನಿಲವಾಡಿ ಮೊದಲಾದವರು ಇದ್ದರು.

ಪುರಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್‌ಪ್ರತಿಮೆ ಮುಂಭಾಗ ದಸಂಸದಿಂದ ಧರಣಿ ನಡೆಸಲಾಯಿತು.

ದೇವರಾಜ ಠಾಣೆ ಪೊಲೀಸರಿಂದ ಕಳ್ಳನ ಬಂಧನ: ₹15 ಲಕ್ಷ ಮೌಲ್ಯದ 33 ದ್ವಿಚಕ್ರ ವಾಹನಗಳ ವಶ

ಶೋಕಿ ಹಾಗೂ ಸುಲಭವಾಗಿ ಹಣ ಸಂಪಾದಿಸುವ ಉದ್ದೇಶದಿಂದ ದ್ವಿಚಕ್ರವಾಹನ ಕಳ್ಳತನ

• **ಕನ್ನಡಪ್ರಭ ವಾರ್ತೆ** ಮೈಸೂರು

ತನ್ನ ಶೋಕಿಗಳಿಗಾಗಿ, ಸುಲಭವಾಗಿ ಹಣ ಸಂಪಾದಿಸಲು ದ್ವಿಚಕ್ರವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಮೈಸೂರಿನ ದೇವರಾಜ ಠಾಣೆಯ ಪೊಲೀಸರು ಬಂಧಿಸಿ, 15 ಲಕ್ಷ ರೂ. ಮೌಲ್ಯದ 33 ದ್ವಿಚಕ್ರವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಹಾರನಹಳ್ಳಿ ಹೋಬಳಿ ನಿಲುವಾಡಿ ಗ್ರಾಮದ ನಿವಾಸಿ ಲೇ. ಬಲರಾಮೇಗೌಡ ಎಂಬವರ ಪುತ್ರ ಶ್ರೀನಿವಾಸ ಅ. ಸೀನ (41) ಬಂಧಿತ ಆರೋಪಿ. ಈತನನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶ್ರೀನಿವಾಸ್‌ಅವಿವಾಹಿತನಾಗಿದ್ದು ತಾಯಿಯೊಂದಿಗೆ ವಾಸವಿದ್ದ. ಕೆಲಸಕ್ಕೆ ಹೋಗದೆ ಇದ್ದರೂ, ಶೋಕಿ ಮಾಡಲು ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನಮಾಡುತ್ತಿದ್ದ. ಕಳ್ಳತನಮಾಡಿದ್ದವಾಹನಗಳನ್ನು ಪಿರಿಯಾಪಟ್ಟಣ ತಾಲೂಕಿನ ಚಿಕ್ಕನೇರಳೆ, ದೊಡ್ಡ ನೇರಳೆ, ಸಂತೆಮಾಳ, ಕೆಲ್ಲೂರು ಗ್ರಾಮಗಳಲ್ಲಿ ಮಾರಾಟ ಮಾಡುತ್ತಿದ್ದ. ಇದು ಲೋನ್ ಕಟ್ಟದೇ ವಶಪಡಿಸಿಕೊಂಡಿರುವ ವಾಹನ, ಕಾನೂನು ಕ್ರಮ ಮುಗಿದ ಬಳಿಕ ದಾಖಲಾತಿಗಳನ್ನು ತಂದು ಕೊಡುವುದಾಗಿ ನಂಬಿಸಿ ಮಾರಾಟ ಮಾಡುತ್ತಿದ್ದದ್ದು ಗೊತ್ತಾಗಿದೆ. ಅಲ್ಲದೆ, ಆರೋಪಿ ವಿರುದ್ಧ ಪಿರಿಯಾಪಟ್ಟಣ ಠಾಣೆಯಲ್ಲಿಸುಲಿಗೆಪ್ರಕರಣಸಹದಾಖಲಾಗಿರುವುದು ಪೊಲೀಸರ ವಿಚಾರಣೆಯಲ್ಲಿ ಗೊತ್ತಾಗಿದೆ.

ಇತ್ತೀಚೆಗೆ ಕೆ.ಆರ್. ಆಸ್ಪತ್ರೆಯ ಪಾರ್ಕಿಂಗ್‌ಜಾಗದಿಂದ ಹೆಚ್ಚಾಗಿ ವಾಹನಗಳು ಕಳವಾಗುತ್ತಿದ್ದವು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ದೇವರಾಜ ಠಾಣೆ ಪೊಲೀಸರು, ತನಿಖೆ ಆರಂಭಿಸಿದ್ದರು. ಹೀಗಿರುವಾಗ, ಆ.14 ರಂದು ಕಾಳಿದಾಸ ರಸ್ತೆ ಮಾರಮ್ಮ ದೇವಸ್ಥಾನದ ಹತ್ತಿರ ಕಡಿಮೆಗೆ ಬೆಲೆಗೆ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿ ಶ್ರೀನಿವಾಸನನ್ನು ಪೊಲೀಸರು ಖಚಿತ ಮಾಹಿತಿ ಮೇರೆಗೆ ಬಂಧಿಸಿದ್ದಾರೆ.

ಆರೋಪಿ ಬಂಧನದಿಂದ ದೇವರಾಜ ಠಾಣೆಯಲ್ಲಿ 9, ನಜರ್‌ಬಾದ್ ಠಾಣೆ 6, ಮೇಟಗಳ್ಳಿ ಮತ್ತು ವಿಜಯನಗರ ಠಾಣೆಯ ತಲಾ 2, ಜಯಲಕ್ಷ್ಮೀಪುರಂ, ಆಶೋಕಪುರಂ, ಕೆ.ಆರ್. ಠಾಣೆಯಲ್ಲಿ ತಲಾ 1, ಮೈಸೂರು ಜಿಲ್ಲೆಯ ಹುಣಸೂರು ಪಟ್ಟಣ ಠಾಣೆಯ 7, ಕೆ.ಆರ್. ನಗರ ಠಾಣೆಯ 2, ಎಚ್.ಡಿ. ಕೋಟೆ ಹಾಗೂ ಹಾಸನದ ಕೊಣನೂರು ಠಾಣೆಯಲ್ಲಿ ತಲಾ 1 ಸೇರಿದಂತೆ ಒಟ್ಟು 33 ದ್ವಿಚಕ್ರವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಕೆ.ಎಸ್. ಸುಂದರ್‌ರಾಜ್, ದೇವರಾಜ ಉಪ ವಿಭಾಗದ ಎಸಿಪಿ ಕೆ. ರಾಜೇಂದ್ರ ಮಾರ್ಗದರ್ಶನದಲ್ಲಿ ದೇವರಾಜ ಠಾಣೆಯ ಇನ್ಸ್‌ಪೆಕ್ಟರ್‌ಕೆ.ಆರ್. ರಘು, ಎಸ್‌ಐ ಎಸ್. ನಾಗರಾಜ ಮತ್ತು ಸಿಬ್ಬಂದಿ ಆರ್. ಆರ್. ಮಂಜುನಾಥ, ಎಂ.ಪಿ. ಮಂಜುನಾಥ, ಎಚ್.ವಿ. ಮಧುಕೇಶ್, ವೈ.ಟಿ. ಮಹೇಶ್, ಎಚ್.ಆರ್. ಮಂಜುನಾಥ. ಸಿ. ಸುನೀಲ್ ಕುಮಾರ್, ಎನ್.ಎಂ. ಮಹೇಶ್ ಕುಮಾರ್, ಶಿವರಾಜ್ ಕುಮಾರ್, ತಾಂತ್ರಿಕ ಕೋಶದ ಕುಮಾರ್, ಸಿ.ಎಂ. ಮಂಜು ಈ ಪತ್ತೆ ಮಾಡಿದ್ದಾರೆ.

ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನಲ್ಲಿ ಪ್ರಾಯೋಗಿಕ ಕಾರ್ಯಾಗಾರ ಯಶಸ್ವಿ ಸಂಪನ್ನ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಕರ್ನಾಟಕ ರಾಜ್ಯ ಆಲೈಡ್ ಮತ್ತು ಹೆಲ್ತ್‌ಕೇರ್‌ಪ್ರೊಫೆಷನ್ಸ್ ಕೌನ್ಸಿಲ್ ಸಹಯೋಗದಲ್ಲಿ ಸಾಮರ್ಥ್ಯಾಧಾರಿತ ಶಿಕ್ಷಣದ ಸಮನ್ವಯ: ಪಾಠ ಯೋಜನೆ, ಬೋಧನಾ ತಂತ್ರಗಳು ಮತ್ತು ಮೌಲ್ಯಮಾಪನ ವಿಧಾನಗಳು ಕುರಿತು ಪ್ರಾಯೋಗಿಕ ಕಾರ್ಯಾಗಾರವನ್ನು ಆಯೋಜಿಸಿತ್ತು.

ಈ ಕಾರ್ಯಾಗಾರ ಉದ್ಘಾಟಿಸಿದ ಕರ್ನಾಟಕ ರಾಜ್ಯ ಆಲೈಡ್ ಮತ್ತು ಹೆಲ್ತ್‌ಕೇರ್‌ಪ್ರೊಫೆಷನ್ಸ್ ಕೌನ್ಸಿಲ್ ಸ್ವಾಯತ್ತ ಮಂಡಳಿ, ನೈತಿಕತೆ ಮತ್ತು ನೋಂದಣಿ ವಿಭಾಗದ ಅಧ್ಯಕ್ಷೆ ಅನಿತಾ ಮಿಸ್‌ಕ್ವಿತ್‌ಮಾತನಾಡಿ, ಫಿಸಿಯೋಥೆರಪಿಸ್ಟ್‌ಗಳ ನೋಂದಣಿ ಪ್ರಕ್ರಿಯೆಯನ್ನು ಕೌನ್ಸಿಲ್ ವತಿಯಿಂದ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಇದರಿಂದ ವೃತ್ತಿಪರರು ಅಧಿಕೃತವಾಗಿ ನೋಂದಾಯಿಸಿಕೊಳ್ಳಲು ಹಾಗೂ ವೃತ್ತಿಪರ ಮಾನ್ಯತೆ ಮತ್ತು ಹೊಣೆಗಾರಿಕೆಯನ್ನು ಮತ್ತಷ್ಟು ಬಲಪಡಿಸಲು ಸಾಧ್ಯವಾಗಲಿದೆ ಎಂದು ಹೇಳಿದರು. ವಿವಿಧ ಸಂಸ್ಥೆಗಳಿಂದ ಒಟ್ಟು 25 ಮಂದಿ ಭಾಗವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ನಿರ್ದೇಶಕ ಆರ್. ಮಹೇಶ್, ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿಯ ಉಪ ಪ್ರಾಂಶುಪಾಲೆ ಡಾ. ಎಂ. ರೇಣುಕಾದೇವಿ, ಪ್ರಾಧ್ಯಾಪಕ ಡಾ. ವಿಜಯ್ ಸ್ಯಾಮುಯೆಲ್ ರಾಜ್ ಮೊದಲಾದವರು ಇದ್ದರು.



ಶೇ.100 ಫಲಿತಾಂಶ ತಂದ ಶಾಲಾ ಮುಖ್ಯೋಪಾಧ್ಯಾಯರಿಗೆ ಅಭಿನಂದನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ವಿದ್ಯಾರಣ್ಯಪುರಂನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಬಾಲಕರ, ಬಾಲಕಿಯರ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ತಂದು ಕೊಟ್ಟ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಜಯರಾಮೇಗೌಡ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ತಿಪ್ಪೇಸ್ವಾಮಿ ಅವರನ್ನು ಶಾಸಕ ಟಿ.ಎಸ್. ಶ್ರೀವತ್ಸ ಅಭಿನಂದಿಸಿದರು. ಪಾಲಿಕೆ ಮಾಜಿ ಸದಸ್ಯ ಎಲ್. ಜಗದೀಶ್, ವಾರ್ಡ್ ನಂ. 61 ರ ಅಧ್ಯಕ್ಷ ಶಿವಪ್ರಸಾದ್, ಕಾರ್ಯದರ್ಶಿ ಚಂದ್ರಶೇಖರ್, ಬಿಜೆಪಿ ಮುಖಂಡರಾದ ಪ್ರದೀಪ್, ವೆಂಕಟೇಶ್, ಅನಂತತೀರ್ಥ, ರಾಜು, ಶಾಲೆಯ ಶಿಕ್ಷಕರಾದ ಇಂದಿರಾ, ಪ್ರಕಾಶ್, ಮಹೇಶ್, ಮಂಜುನಾಥ್ ಮತ್ತು ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದ್ದರು.

2008ರಲ್ಲಿ ಶತಮಾನೋತ್ಸವವನ್ನು ಆಚರಿಸಿಕೊಂಡ ರಾಜ್ಯದ ಏಕೈಕ ಪಟ್ಟಣ ಸಹಕಾರ ಬ್ಯಾಂಕ್ 'ಎ' ಶ್ರೇಣಿ ಸಹಕಾರಿ ಬ್ಯಾಂಕ್

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್, ನಿ.
ಗಾಂಧಿಚೌಕ, ಮೈಸೂರು - 570 001

ಬ್ಯಾಂಕಿನ ಸಂಸ್ಥಾಪಕರು
ರಾಜರ್ಷಿ ಶ್ರೀ ಶ್ರೀ ಶ್ರೀ ಸಾಲ್ವಡಿ ಕೃಷ್ಣರಾಜ ಒಡೆಯರ್‌ರವರು

ಸಹಕಾರಿ ಪಿತಾಮಹ
ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಕವರು

2025-26ನೇ ಸಾಲಿನ
120ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಗೆ ಆಹ್ವಾನ

ಸನ್ಮಾನ್ಯ ಸದಸ್ಯರುಗಳಲ್ಲಿ ವಿನಂತಿ,
ಈ ಬ್ಯಾಂಕಿನ 2025-2026 ಸಾಲಿನ 120ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 23-08-2026ರ ಭಾನುವಾರದಂದು ಬೆಳಿಗ್ಗೆ 10:00 ಗಂಟೆಗೆ ಮೈಸೂರು ನಗರದ ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಆಡಿಟೋರಿಯಂ (ಜೆ.ಕೆ.ಗ್ರೌಂಡ್)ನಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜೆ.ಯೋಗೇಶ್‌ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರದ ವರದಿ ಪುಸ್ತಕಗಳನ್ನು ಕಳುಹಿಸಲಾಗಿದೆ. ಆಹ್ವಾನ ಪತ್ರದ ವರದಿ ಪುಸ್ತಕ ತಲುಪದಿದ್ದರೆ, ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/-
ಮುಖ್ಯಕಾರ್ಯ ನಿರ್ವಾಹಕ

ನಮ್ಮ ಬ್ಯಾಂಕಿನಲ್ಲಿ ವಿವಿಧ ಅಳತೆಯ ಲಾಕರ್ ಸೌಲಭ್ಯವಿದೆ | ಸೋಮವಾರ 24-08-2026ರಂದು ಬ್ಯಾಂಕಿಗೆ ರಜೆ ಇರುತ್ತದೆ

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಸುಳ್ಳುಸುದ್ದಿ ನಂಬಬೇಡಿ ಬ್ಯಾಂಕ್ ಸದೃಢವಾಗಿ ಲಾಭದಾಯಕವಾಗಿರುತ್ತದೆ

PUBLIC NOTICE

My Client, **Smt. Kavitha C J** W/o Nagesh Gowda C, aged about 42 years, residing at No. C 306, 3rd Floor, Inland Edition Apartment, 1st Cross, 4th Phase, Yalahanka New Town, Bengaluru North, Bengaluru 560 064 intends to purchase the property morefully described in the schedule hereunder, from its lawful owners and khatedars **1) R Jayakumar** S/o late C V Rudrappachar, aged about 64 years, **2) Smt. Veena N** W/o R Jayakumar, Aged about 54 years, **3) Sri. Ravi Kumar J** S/o R Jayakumar, aged about 34 years, and **4) Sri. Sathya Keerthi J** S/o R Jayakumar, aged about 32 years, all are residing at No.954/13, CH-32/16, Sheshadri Iyer Road, Lakshmipuram, Mysuru - 570004.

Any person/s having any claim, right, title or interest in the schedule property may write to the undersigned with documentary proof within **7 days** from the date of publication of this notice and if no valid objections are received within the stipulated time, our client will proceed to purchase the schedule property, with assumptions that there are no objections or claims from any person/s against our client purchasing the schedule property.

SCHEDULE PROPERTY

All that piece and parcel of the property bearing No.611 F-181, 611/1 F-181, 611/2 F-181/2, situated at **South side of Veerashaiva Rudra Boomi, (Industrial Suburb, 1st Stage) Fort Mohalla, Mysuru,** site measuring East to West 35.00 Feet (10.67 Meters) and North to South 30.00 feet (9.14 Meters) totally 97.548580 Square Meters, consisting about 97.548150 Square Meters of Ground floor residential building, about 97.548150 Square Meters in First Floor Commercial building, about 97.548150 Square Meters in Second Floor Commercial building, and about 55.7418 Square Meters of Third Floor Commercial building with RCC and Red oxide flooring, having separate water and Electricity meters and having other civic amenities and bounded on the:

East By : Property No.612
West By : 30.00 Feet Road (Sterling Theater Road)
North By : 30.00 Feet Road
South By : Property No.621

Pradeep B.N Advocate
Ground Floor, 3rd Cross, Near Venkatappa Layout,, Shanthinagar, Sri Venkateshwara Theatre Rightside Road, Devanahalli Town 562110

ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘ ನಿಯಮಿತ, ಮೈಸೂರು
#201, ಮೈತ್ರಿ ಆರ್ಕೆಡ್, ಮೊದಲನೆ ಮಹಡಿ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮೇಲೆ, ಶ್ರೀ ವೈಷ್ಣವ ಸಭಾ ಭವನದ ಎದುರು, 1ನೇ ಮೇನ್ ಸರಸ್ವತಿಪುರಂ ಮೈಸೂರು – 570 009
ದೂರವಾಣಿ:0821-4244636 /ಮೊಬೈಲ್:8296598393

ಜೆ.ಆರ್.ಎಂ/ಆಡಳಿತ/ಎ-1/ಹೆಚ್.ಓ.ಟಿ/ಸಿ.ಆರ್.213/49200/2019-20 ದಿನಾಂಕ:08.07.2019

ಎಲ್ಲಾ ಸದಸ್ಯರ ಗಮನಕ್ಕೆ
2025-26 ನೇ ಸಾಲಿನ
8ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ ಸರ್ವ ಸದಸ್ಯರ ದಿನಾಂಕ 23.08.2026 ನೇ ಭಾನುವಾರ ಸಮಯ ಬೆಳಗ್ಗೆ 10-00 ಗಂಟೆಗೆ ಸ್ಥಳ: ರೋಟರಿ ಮೈಸೂರು ವೆಸ್ಟ್ ಸಭಾಂಗಣ, 3ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು-570009 ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಕೆ.ರಾಜಗೋಪಾಲನ್ ಅವರ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿಯು ತೀರ್ಮಾನಿಸಿರುತ್ತದೆ. ತಾವು ಸಕಾಲಕ್ಕೆ ಆಗಮಿಸಿ, ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಕೊಳ್ಳುತ್ತೇನೆ

ದಿನಾಂಕ : 20.07.2026
ಸ್ಥಳ : ಮೈಸೂರು

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಶ್ರೀಮತಿ ಮಹಾಲಕ್ಷಿ ಕೆ.ಎಸ್, ಕಾರ್ಯದರ್ಶಿ

ಬ್ಯಾಂಕ್ ಆಫ್ ಬರೋಡ
ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು

ಇ-ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ ಸಂ	ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ	ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ	ಒಟ್ಟು ಬಾಕಿ ಮೊತ್ತ	ಇ-ಹರಾಜಿನ ದಿನಾಂಕ ಮತ್ತು ಸಮಯ	1) ಮೀಸಲು ಬೆಲೆ, 2) ಇಎಂಡಿ, 3) ಬಿಡ್ ಗುಣಾಂಕ ಮೊತ್ತ, 4) ಸ್ವಾಧೀನದ ರೀತಿ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ.
	ಕುವೆಂಪು ನಗರ ಶಾಖೆ					
1.	**ಶ್ರೀಮತಿ ಕಾವ್ಯಶ್ರೀ ಕೆ ಸಿ** ಕೋಂ ವಿನಯ್ ನಂ. ಟಿ 22, 3ನೇ ಕ್ರಾಸ್, ಯೂನಿವರ್ಸಿಟಿ ಕ್ವಾರ್ಟರ್ಸ್, ಮಾನಸ ಗಂಗೋತ್ರಿ, ಮೈಸೂರು-570006	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಂ. 342